● ಮೋಹನರಾಜು ಎಸ್.ಎ. ಶಂಕರಘಟ್ಟ
ನಾಡಿಗೆ ಕಾಡೇ ಉಸಿರು. ಆದರೆ ಕಾಡಿಗೆ?



ಕಾಡಿನ ನಾಡಿ ಅರಿತವರು.

● ಎ.ಪಿ. ರೇಣುಕಾ, ಮೈಸೂರು
ಓದೋ ಧಾರಾವಾಹಿ ಹೋಯ್ತು, ನೋಡೋ ಧಾರಾವಾಹಿ ಬಂತು. ಮುಂದೆ?
ಶುರುವಾದ ತಕ್ಷಣ ನೋಡುಗರು ಓಡೋ ಧಾರಾವಾಹಿಗಳು ಬರುತ್ತ(ತ್ತಿ)ವೆ.

● ಎ. ಮೃತ್ಯುಂಜಯ, ಪಾಂಡವಪುರ
ಪ್ರೀತಿ ಯಾವುದರಿಂದ ಹುಟ್ಟಿಕೊಳ್ಳತ್ತೆ ಗುರು?
ಪದೇ ಪದೇ ಪರಸ್ಪರ meetಉವುದರಿಂದ.

● ಕಾಡನೂರು ರಾಮಶೇಷ, ಹುಲಿಮಂಗಲ
ಕೊರೊನಾ ವೈರಸ್ ನಮಗೆ ಸ್ವಚ್ಛತೆ, ಪರಿಸರ ಕಾಳಜಿಯ ಪಾಠ ಕಲಿಸಿದ ಮಹದ್ಗುರು. ಏನಂತೀರಿ?



ನಿಜ. ಧರ್ಮದ ರಕ್ಷಣೆ ಆಗಬೇಕಾದರೆ ಅಧರ್ಮದ ಅಟ್ಟಹಾಸ ಅನಿವಾರ್ಯ.

● ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಇಂದು ಮದುವೆ. ನಾಳೆ ಡೈವೋರ್ಸ್. ಯಾಕೆ?
ಇಂದು ತಾಳಿ ಕಟ್ಟುವ ಇಸಮು ನಾಳೆಗೆ ತಾಳಿ ಕಟ್ ಆಗುವಷ್ಟು ಅಹಂ ತೋರುವುದರಿಂದ.

● ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಸಮಗ್ರತೆಯನ್ನು ಕಾಣುವುದು ಯಾವುದರಲ್ಲಿ ರಾಮ್?
ಸೌಂದರ್ಯದ ಆಸ್ವಾದನೆಯಲ್ಲಿ.

● ನಾರಾಯಣ ಯಾಜಿ, ಶಿರಾಲಿ
ನಾಳೆ ಸಾಯಲಿದ್ದೇನೆ. ಇಂದು ಹೇಗೆ ಪ್ರಿಪೇರ್ ಆಗಲಿ?
ನಾಳಿದ್ದು ನಿಮ್ಮನ್ನು ಯಾರೂ ಶಪಿಸದ ರೀತಿಯಲ್ಲಿ.

● ರತ್ನಾ ರಾಜ್‌ಕುಮಾರ್, ಹಾಸನ
ಮದುವೆಯೂಟಕ್ಕೆ ಹೋಗಲೋ, ಬೀಗರೂಟಕ್ಕೆ ರೆಡಿಯಾಗಲೋ ಬೇಗ ಹೇಳಿ ಗುರೂಜಿ?
ಮದುವೆಯೂಟಕ್ಕೆಂದು ಹೊರಡಿ, ಮೇಕಪ್ ಮುಗಿವ ವೇಳೆಗೆ ಬೀಗರೂಟದ ಟೈಮಾಗಿರತ್ತೆ.

● ರತ್ನಾ ಅಶೋಕ ಗೊರವರ, ಧಾರವಾಡ
ಮದುವೆಯಾಗಿ ಅತ್ತೆಮನೆಗೆ ಹೋಗುವಾಗ ಮದುಮಗಳು ಅಳುವುದೇಕೆ?
ಅತ್ತೆಯ ಮನೆಯವರ ಮೇಲೆ ಅಡ್ವಾನ್ಸ್ ಅನುಕಂಪವಂತೆ.

● ಫಾಲನೇತ್ರ ಸಜ್ಜನ, ಶಿರಸಿ
ಇಂಗ್ಲೀಷಿನ ಸಾರಿ ಮತ್ತು ಕನ್ನಡದ ಕ್ಷಮಿಸಿಗಳಲ್ಲಿ ಯಾವುದು ಹೆಚ್ಚು ತೂಕವುಳ್ಳದ್ದು?
ಕ್ಷಮಿಸಿಯೇ. ಸಾರಿ ಬಹಳ ಬಳಕೆಯಿಂದ ಸವೆದುಹೋಗಿದೆ.

● ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಕಣ್ಣಿದ್ದು ಕುರುಡನಾಗಿ, ಕಿವಿಯಿದ್ದು ಕಿವುಡನಾಗಿ ಯಾವಾಗ ಇರಬೇಕು?
ಬಾಯಿಬಿಟ್ಟರೆ ಬಣ್ಣಗೇಡಿ ಆಗುವ ಪರಿಸ್ಥಿತಿ ಉಂಟಾದಾಗ.

● ಎನ್.ಕೆ. ಹೆಬ್ಬಾರ, ಕೋಣೆ
ಕಲಿಯುಗದ ಮುಂದಿನ ಯುಗ ಯಾವುದು?
ನಕಲಿ ಯುಗ.

● ಡಾ. ವಿ. ಪುಗಳೇಂದಿ, ಬಳ್ಳಾರಿ
ಊರೆಲ್ಲ ಸಾಲ ಪಡೆದ ನನ್ನ ಗೆಳೆಯನೊಬ್ಬ ಮುಖಕವಚವನ್ನು ಧರಿಸಿ ಓಡಾಡುತ್ತಿದ್ದಾನಲ್ಲಾ.....?
ದಡ್ಡ. ಈಗ ಕವಚಕ್ಕಿಂತ ಕೆಮ್ಮಿ, ಸೀನುವುದೇ ಸಾಲಗಾರರನ್ನು ದೂರವಿಡಲು ಬೆಸ್ಟ್ ಪ್ಲ್ಯಾನ್.

## ಬಹುಮಾನಿತ ಪ್ರಶ್ನೆ

ಅಮೃತೇಶ್ವರ ತಂಡರ, ಅಣ್ಣಿಗೇರಿ
ಯುದ್ಧದ ಪರಿಣಾಮ ಭೀಕರವೆಂದು ಗೊತ್ತಿದ್ದೂ ಕೆಲವು ವಿಕಾರಿ ಮನಗಳು ಹಾತೊರೆಯುವುದೇಕೆ?
ತೋಳದ ಸಂತತಿಗೆ ಹೆಣಗಳ ರುಚಿಯೇ ರುಚಿ.

● ಅರವಿಂದ ಜಿ. ಜೋಷಿ, ಮೈಸೂರು
ವಿಮಾನದ ಗಗನಸಖಿಯರು ಏರ್ ಹಾಸ್ಟೆಸ್ ಆದರೆ ರೈಲುಸಖಿಯರು?
ಪಲ್ಯೂಟೆಡ್ ಏರ್ ಹೋಸ್ಟೆಸ್.

● ಎಚ್. ಆನಂದ್‌ಕುಮಾರ್, ಚಿತ್ರದುರ್ಗ
ಎರಡಕ್ಷರ ಇಂಗ್ಲಿಷ್ ಬರದ ಗೆಳೆಯನೊಬ್ಬ ಕನ್ನಡ ಕ್ರಿಕೆಟ್ ಕಾಮೆಂಟ್ರಿ ಜರೆಯುವನಲ್ಲಾ ರಾಮ್ ಶಿವಾ?
ತಕ್ಷಣ ಅರ್ಥವಾಗುವುದೆಲ್ಲವೂ ನಿಕೃಷ್ಟ. ಅರ್ಥವಾಗದ್ದೇ ಅಮೋಘ.

● ಕೆ. ಗೋವಿಂದಾಚಾರಿ, ಮೈಸೂರು
ಶಿವನಿಗೆ ಬಿಲ್ವಪತ್ರೆ, ಕೃಷ್ಣನಿಗೆ (ವಿಷ್ಣು) ತುಳಸಿಪತ್ರೆ, ಬ್ರಹ್ಮನಿಗೆ?
ಅವನು ಸೃಷ್ಟಿಸುವ ಗೊಂಬೆಗಳಿಗಾಗಿ ಅಲ್ಲಲ್ಲಿ ಹೆರಿಗೆ ಆಸ್ಪತ್ರೆ.



● ವಿ. ಹೇಮಂತಕುಮಾರ್, ಬೆಂಗಳೂರು
ದ್ವೇಷ ಇಲ್ಲದ ದೇಶ ಇಲ್ಲ ಅಂತಾರೆ. ನಿಜಾನಾ ರಾಮ್‌ಜಿ?
ದೇಶ ಅಂತಿರಲಿ, ದ್ವೇಷವಿಲ್ಲದ ದೇಹ ಇರುವುದೂ ಅನುಮಾನವೇ.

● ಟಿ.ಎಂ. ಮಾನಪ್ಪ, ಶಿವಮೊಗ್ಗ
ಪ್ಲೇನ್‌ದೋಸೆ, ಪೇಪರ್‌ದೋಸೆ, ನೀರ್‌ದೋಸೆ, ಬೆಣ್ಣೆ ದೋಸೆಗಳಿಗೆ ವ್ಯತ್ಯಾಸ ತಿಳಿಸಬಲ್ಲಿರಾ?
ಪ್ಲೇನ್‌ದೋಸೆ ಬಾಲೆ, ಪೇಪರ್ದೋಸೆ ಯುವತಿ, ನೀರ್ದೋಸೆಗೆ ಸಿಹಿಯಾದ ಸಖಿಯರು, ಬೆಣ್ಣೆದೋಸೆ ಡಯಟ್ ಮಾಡದ ಕುಳ್ಳಿ.

■ ರಾಮ್